# ಮಕ್ಕಳೇ ಅವರ ಬದುಕಿನ ಪರಿಣತರು- ಅವರಿಗೆ ಕಿವಿಗೊಡೋಣ!

ಮ್ಯಾಡ್ ಇನ್ ಏಷ್ಯಾ ಪೆಸಿಫಿಕ್*

(*ಇದು ಒಂದು ಆನ್ಲೈನ್ ವೇದಿಕೆಯಾಗಿದ್ದು, ಇದರಲ್ಲಿ ಮಾನಸಿಕ ಅಸ್ವಸ್ಥತೆ ಮತ್ತು ಅಸಾಮರ್ಥ್ಯಗಳ ಕುರಿತ ಲೇಖನಗಳನ್ನು ಪ್ರಕಟಿಸಲಾಗುತ್ತದೆ)

ಪ್ರಥಮಾ ರಾಘವನ್, ಏಪ್ರಿಲ್ 8, 2020



ಶಾಲಾ ವ್ಯವಸ್ಥೆಯಲ್ಲಿನ ನಿರೂಪಣಾ ಕ್ರಮಗಳ ವಿವಿಧ ಅನ್ವಯಗಳ ಮೂಲಕ ಶಾಲೆಗಳನ್ನು ಸುರಕ್ಷಿತಗೊಳಿಸುವ ವಿಧಾನಗಳು ಮತ್ತು ಕಾರ್ಯತಂತ್ರಗಳ ಕುರಿತಾದ ಮೂರು ಭಾಗಗಳ ಸರಣಿಯಲ್ಲಿ ಈ ಪ್ರಬಂಧವು ಮೊದಲನೆಯದು. ಎರಡನೆಯ ಮತ್ತು ಮೂರನೆಯ ಲೇಖನವನ್ನೂ ನೀವು ಓದಬಹುದು.

---

ನಾನು ಕೆಲಸ ಮಾಡುವ ಶಾಲೆಯಲ್ಲಿ ಕಳೆದ ವಾರ ಏರ್ಪಾಡಾಗಿದ್ದ ವಾರ್ಷಿಕ ಪ್ರದರ್ಶನದಲ್ಲಿ ದೃಶ್ಯ ಮಾಧ್ಯಮದ ವಿದ್ಯಾರ್ಥಿಗಳ ರಚನೆಗಳನ್ನು ವೀಕ್ಷಿಸುತ್ತಿದ್ದ ವೇಳೆ ಈ ಲೇಖನವನ್ನು ಬರೆಯುವ ವಿಚಾರ ನನಗೆ ಬಂತು. ಇವೆಲ್ಲವೂ 16 ರಿಂದ 18 ರ ಹರೆಯದ ವಿದ್ಯಾರ್ಥಿಗಳ ಪರಿಕಲ್ಪನೆಯಲ್ಲಿ ಮೂಡಿಬಂದ ಕಲಾ ರಚನೆಗಳಾಗಿದ್ದವು. ಇವುಗಳಲ್ಲಿ ಅನೇಕ ಕಲಾಕೃತಿಗಳು, ನಾವು ಬದುಕುತ್ತಿರುವ ಸಮಾಜದಲ್ಲಿ ಕಾಣುವ ಸೌಂದರ್ಯದ ಮಾನದಂಡ, ಶಿಕ್ಷಣದಂತಹ ವಿಚಾರಗಳ ಬಗ್ಗೆ ವಿಮರ್ಶಾತ್ಮಕ ಸಂವೇದನೆಯನ್ನು ಹೊಂದಿದ್ದವು. ನಮ್ಮ ದೈನಂದಿನ ಬದುಕಿನಲ್ಲಿ ವಯಸ್ಕರು

ಅಲಕ್ಷಿಸಿಬಿಡುವ ಅಥವಾ 'ಅದು ಇರೋದೇ ಹಾಗೆ' ಎಂಬ ಧೋರಣೆ ತೋರುವ ಸಂಗತಿಗಳ ಬಗ್ಗೆ ಅವರು ಬೆಳಕು ಚೆಲ್ಲಿದ್ದರು.

ವಿಶೇಷವಾಗಿ, ಪ್ರಶಮನ್ ಮೈನಾಲಿ ಎಂಬ ಕಲಾವಿದರು ರಚಿಸಿದ್ದ ಕಲಾಕೃತಿ ನನ್ನ ಮನ ಸೆಳೆಯಿತು.ಅದರ ಶೀರ್ಷಿಕೆ 'ಡಿಸ್‌ಲೆಕ್ಸಿಯ' ಎಂದು. ಮೇಲ್ಭಾಗದಲ್ಲಿ ಸಿರಿಂಜ್. ಕೆಳಭಾಗದಲ್ಲಿ ಒಂದು ಮೆದುಳು. ಮೆದುಳಿಗೆ ಸಿರಿಂಜ್‌ನಿಂದ ಏನನ್ನೋ ತುಂಬಲಾಗುತ್ತಿದೆ ಎಂಬಂತೆ ಇದ್ದ ಒಂದು ಚಿತ್ರ ಅದಾಗಿತ್ತು. ಸಿರಿಂಜಿನ ಮೇಲೆ ಔಷಧದ (ಡೋಸೇಜ್) ರೀತಿಯಲ್ಲಿ ಪ್ರತಿಯೊಂದು ಪಠ್ಯವಿಷಯದ ಹೆಸರು ಹಾಗೂ ಅದರ ಎದುರು ಉತ್ತೀರ್ಣ ಅಥವಾ ಅನುತ್ತೀರ್ಣ ಎಂಬ ಬರಹವನ್ನು ಚಿತ್ರಿಸಲಾಗಿತ್ತು. ಅದರ ಬಗ್ಗೆ ಪ್ರಶಮನ್ ನನಗೆ ವಿವರಿಸುತ್ತಾ, ಶಿಕ್ಷಣದ ಹೆಸರಿನಲ್ಲಿ ವಿದ್ಯಾರ್ಥಿಗಳ ತಲೆಗೆ ಒತ್ತಾಯಪೂರ್ವಕವಾಗಿ ಮಾಹಿತಿಗಳನ್ನು ತುಂಬಲಾಗುತ್ತದೆ. ತನ್ನ ಶಿಕ್ಷಣದ ಅನುಭವವನ್ನೇ ಇಲ್ಲಿ ಪ್ರತಿನಿಧಿಸುತ್ತಿದ್ದೇನೆ ಎಂದು ಹೇಳಿದರು.

ದೈಹಿಕ ಅಸಾಮರ್ಥ್ಯ ಹಾಗೂ ಭಿನ್ನತೆಗಳಿರುವ ಮಕ್ಕಳು ಹಾಗೂ ಯುವಜನರೊಂದಿಗೆ ಕಳೆದ 12 ವರ್ಷಗಳಿಂದ ಕೆಲಸ ಮಾಡುತ್ತಿರುವ ನನ್ನ ಅನುಭವದಿಂದ ಹೇಳುವುದಾದರೆ, ಮಕ್ಕಳು ಮತ್ತು ಯುವಜನರು ಜಗತ್ತಿನಲ್ಲಿ ತಮಗೆ ಸರಿ ಕಾಣದೇ ಇರುವ ಸಂಗತಿಗಳ ಬಗ್ಗೆ ಮುಲಾಜಿಲ್ಲದೇ ಬೆಳಕು ಚೆಲ್ಲುತ್ತಾರೆ ಎಂಬುದು ನನಗೆ ಸ್ಪಷ್ಟವಾಗಿದೆ. ಬಹುತೇಕ ವಯಸ್ಕರು, ಬದುಕನ್ನು ಬಂದ ಹಾಗೆ ಎದುರಿಸಬೇಕು ಎಂಬ ಕಾರಣಕ್ಕೆ, ಒಂದೋ ಸಮಸ್ಯೆಗಳತ್ತ ಅವರು ಗಮನ ಕೊಡುವುದಿಲ್ಲ ಅಥವಾ ಗಮನ ಕೊಡಲು ವ್ಯವಸ್ಥೆ ಅವರನ್ನು ಬಿಡುವುದಿಲ್ಲ. ಮಕ್ಕಳು ಮತ್ತು ಯುವಜನರು ಇದನ್ನು ನಮ್ಮ ಮುಂದೆ ವ್ಯಕ್ತಪಡಿಸುವ ಅವಕಾಶಕ್ಕಾಗಿ ಎದುರುನೋಡುತ್ತಿರುತ್ತಾರೆ. ಇಲ್ಲಿ ನಾನು ಪ್ರಸ್ತಾಪಿಸಿರುವ ಚಿತ್ರಕಲಾ ಪ್ರದರ್ಶನಕ್ಕೆ ಅನೇಕ ಶಿಕ್ಷಕರಿಂದ ಸಿಕ್ಕಿದ ಪ್ರತಿಕ್ರಿಯೆ ಕೂಡಾ ಇದನ್ನು ನಿರೂಪಿಸುತ್ತದೆ. ವಿದ್ಯಾರ್ಥಿ ಏನನ್ನು ಹೇಳಲು ಪ್ರಯತ್ನಿಸಿದ್ದರು ಎಂಬುದನ್ನು ಅವರು ಮಾತು ಪ್ರತಿಧ್ವನಿಸಿತು ಮತ್ತು ಅರ್ಥಪೂರ್ಣವಾದ ಕಟುಸತ್ಯವೊಂದು ಕಣ್ಣೆದುರೇ ತೆರೆದುಕೊಂಡಿತ್ತು. ಮಕ್ಕಳು ಮತ್ತು ಯುವಜನರೊಡನೆ ಸಮಾಲೋಚಿಸುವಾಗಲೂ ಅವರು ಪರ್ಯಾಯದ ಸಾಧ್ಯತೆಗಳನ್ನು ಒದಗಿಸುತ್ತಾರೆ. ಹೀಗೆ ಭೇಟಿಯಾಗುವ ಮಕ್ಕಳು ಮತ್ತು ಯುವಜನರ ಮಾತನ್ನು ಮನಸ್ಸಿಟ್ಟು ಕೇಳಿಸಿಕೊಳ್ಳುವ ಮೂಲಕ ಇದನ್ನು ನಾನು ಸತತವಾಗಿ ಕಲಿಯುತ್ತಲೇ ಇದ್ದೇನೆ.

ಮನೋವಿಜ್ಞಾನದ ಪ್ರಾಧ್ಯಾಪಕರು, ಕ್ಯಾಲಿಫೋರ್ನಿಯಾದ ಬರ್ಕ್‌ಲಿ ಯುನಿವರ್ಸಿಟಿಯಲ್ಲಿ ತತ್ವಶಾಸ್ತ್ರದ ಸಂಯೋಜಿತ ಪ್ರಾಧ್ಯಾಪಕರು (affiliated professor), ಸಂಜ್ಞಾನಾತ್ಮಕ ವಿಕಾಸ ಮತ್ತು ಕಲಿಕಾ ಪ್ರಯೋಗಾಲಯದ (Cognitive Development and Learning Lab) ಮುಖ್ಯಸ್ಥರೂ ಆಗಿರುವ ಅಲಿಸನ್ ಗೊಪ್ನಿಕ್ (Alison Gopnik) ಅವರು, ಮಕ್ಕಳು ಹೇಗೆ ಕಲಿಯುತ್ತಾರೆ, ಎಳೆ ಮೆದುಳಿನ ಸೃಜನಶೀಲತೆ ಮತ್ತು ಒಂದು ಪ್ರಭೇದವಾಗಿ ನಮಗೆ ಅದು ಹೇಗೆ ಮುಖ್ಯ ಎಂಬುದನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ್ದಾರೆ. 'ಆನ್ ಬೀಯಿಂಗ್' (On Being) ಎಂಬ ಪಾಡ್‌ಕಾಸ್ಟ್‌ನಲ್ಲಿ ಕ್ರಿಸ್ತಾ ಟಿಪ್ಪೆಟ್ (Krista Tippett) ನಡೆಸಿಕೊಟ್ಟ ಸಂದರ್ಶನವೊಂದರಲ್ಲಿ ಅವರು, ಮಕ್ಕಳು ಹೇಗೆ ನಿರಂತರ ಅನ್ವೇಷಣೆಯಲ್ಲಿ ತೊಡಗಿರುತ್ತಾರೆ ಎಂಬುದನ್ನು ಕುರಿತು ಮಾತನಾಡಿದ್ದಾರೆ. ಅದು 'ನಾವು ಮುಂದೆ ಏನು ಮಾಡಬೇಕು?' ಎಂಬ ಯೋಚನೆಯಿಂದ ಮುಕ್ತವಾದ ಒಂದು ಸ್ಥಿತಿ. ನಾವು ಸಾಧ್ಯತೆಗಳ ವ್ಯಾಪ್ತಿಯನ್ನು, ಅಂದರೆ, ಜಗತ್ತಿನಲ್ಲಿರುವ ಸಾಧ್ಯತೆಗಳ ವ್ಯಾಪ್ತಿ, ಆಲೋಚನೆಗಳ ಸಾಧ್ಯತೆಯ ವ್ಯಾಪ್ತಿ, ಜಗತ್ತು ವಾಸ್ತವವಾಗಿ ಇರುವ

ರೀತಿಗಿಂತ ಭಿನ್ನವಾಗಿ ಇರಬಹುದಾದ ಕಾಲ್ಪನಿಕ ಮಾರ್ಗಗಳ ವ್ಯಾಪ್ತಿಯು ಎಲ್ಲ ಸಾಧ್ಯತೆಗಳನ್ನೂ ಅನ್ವೇಷಿಸಲು ಸಮರ್ಥರಾಗುತ್ತೇವೆ. ಹೀಗೆ... ನಮ್ಮ ಸುತ್ತಲಿನ ಬೇರೆ ಬೇರೆ ಮೂಲಗಳಿಂದ ಬರುವ, ನಮ್ಮ ಸುತ್ತಲಿನ ಜಗತ್ತಿನಿಂದ ಬರುವ ವಿಭಿನ್ನ ಮಾಹಿತಿಗಳಿಗೆ ನಾವು ಮುಕ್ತರಾಗಿರುತ್ತೇವೆ ಎಂಬ ರೀತಿಯ ಸ್ಥಿತಿಯೇ ಎಳೆಯ ಮಕ್ಕಳು ಸದಾ ಇರುವ ಸಾರ್ವಕಾಲಿಕ ಸ್ಥಿತಿ ಎಂದು ನನಗೆ ಅನಿಸುತ್ತದೆ' ಎಂದು ಅಲಿಸನ್ ಗೊಪ್ನಿಕ್ ಹೇಳಿದ್ದಾರೆ.

ಮುಂದುವರಿದು ಅವರು, ಹದಿಹರೆಯದವರು ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅವರ ಸೃಜನಶೀಲತೆಯ ಬಗ್ಗೆಯೂ ಮಾತನಾಡಿದ್ದಾರೆ.

"ಒಂದು ಸಮಸ್ಯೆಯನ್ನು ಅಂದರೆ, 'ಆ ವ್ಯಕ್ತಿ ಯಾಕೆ ಹಾಗೆ ಮಾಡಿದರು?' ಎಂಬಂತಹ ಸಮಸ್ಯೆಯನ್ನು ಬಗೆಹರಿಸಬೇಕಾದ ಸಂದರ್ಭದಲ್ಲಿ, ಹೆಚ್ಚು ನಮ್ಯತೆಯ ಆಲೋಚನೆಯ ಮನೋಭಾವ ತೋರಿಸುವವರೆಂದರೆ ಹದಿಹರೆಯದವರು. ನನಗನಿಸುತ್ತೆ, ಸಾಮಾಜಿಕ ಬದಲಾವಣೆಯ ಸಂದರ್ಭದಲ್ಲಿ ಹದಿಹರೆಯದವರೇ ಹೆಚ್ಚು ಪ್ರಮುಖ ಸ್ಥಾನದಲ್ಲಿದ್ದಾರೆ ಎನ್ನಲು ಅನೇಕ ಕಾರಣಗಳಿವೆ. ಜಗತ್ತನ್ನು ವಿಭಿನ್ನ ನೆಲೆಗಳಲ್ಲಿ ನೋಡುವ ಅವರ ಆಲೋಚನಾ ಸಾಮರ್ಥ್ಯವೇ ಇದಕ್ಕೆ ಕಾರಣವಿರಬಹುದು' ಎನ್ನುತ್ತಾರೆ.

ಇದರಿಂದ, ಆಪ್ತಸಮಾಲೋಚಕರಾಗಿಯೂ, ಮಕ್ಕಳೊಂದಿಗೆ ಹಾಗೂ ಹದಿಹರೆಯದವರೊಂದಿಗೆ ಕಾರ್ಯ ನಿರ್ವಹಿಸುವವರಾಗಿಯೂ ನಮಗೇನು ಸಾಧ್ಯತೆಗಳು ತೆರೆಯಬಹುದು?

**ಶಾಲಾ ಸಂದರ್ಭದಲ್ಲಿನ ಸಂಕಥನಗಳು**

'ನರೇಟಿವ್ ಕೌನ್ಸೆಲಿಂಗ್ ಇನ್ ಸ್ಕೂಲ್ಸ್' (Narrative Counseling in schools) ಎಂಬ ಪುಸ್ತಕದ ಕರ್ತೃಗಳಾದ ಜಾನ್ ಎಂ. ವಿನ್ಸ್‌ಡೇಲ್ (John. M. Winsdale) ಮತ್ತು ಜೆರಾಲ್ಡ್ ಡಿ. ಮಾಂಕ್ (Gerald. D. Monk) ಅವರು, "ವಿದ್ಯಾರ್ಥಿಗಳಲ್ಲಿ ನಿರ್ದಿಷ್ಟ ಜ್ಞಾನವನ್ನು ತುಂಬುವಂತೆ ಶಿಕ್ಷಕರಿಗೆ ನಿರ್ದೇಶನ ನೀಡುವ ಪ್ರವೃತ್ತಿ" ಕುರಿತು ಪ್ರಸ್ತಾಪಿಸುತ್ತಾರೆ. ಇದು, ನಾನು ಈ ಮೇಲೆ ಬರೆದಿರುವ ವಿದ್ಯಾರ್ಥಿ ಬಿಡಿಸಿದ ಚಿತ್ರದ ವಿಚಾರದಂತೆಯೇ ಇದೆ. ಮುಂದುವರಿದು ಅವರು ಹೇಳುವುದೇನೆಂದರೆ, "ವಿದ್ಯಾರ್ಥಿಗಳಿಗೆ ಒಂದು ವೇಳೆ ಅರ್ಥವಾಗದೇ ಇದ್ದರೆ, ಶಿಕ್ಷಕರು ತರಗತಿ ಅವಧಿಯನ್ನು ಮುಂದುವರಿಸುವ ಅಥವಾ ಅದೇ ಪಾಠವನ್ನು ಮತ್ತೆ ಮತ್ತೆ ಮಾಡುವ ಮೂಲಕ ವಿದ್ಯಾರ್ಥಿಗಳ ತಲೆಗೆ ತುಂಬುವ ಕೆಲಸ ಮಾಡುತ್ತಾರೆ" ಎಂದು.

ತಮ್ಮ ಈ 'ಗುರಿ ಮುಟ್ಟುವ ಉದ್ದೇಶಕ್ಕೆ' ನೆರವು ಕೋರಿ ಆಪ್ತಸಮಾಲೋಚಕರನ್ನು ಅವರು ಎಷ್ಟು ಸಲ ಕರೆಯುತ್ತಾರೆ ಎಂಬುದನ್ನೂ ಅವರು ಈ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. "ಯುವಜನರು ಸಾಗಬೇಕಾದ ಪ್ರಗತಿ ಪಥದ ಬಗ್ಗೆ ಅವರು (ಆಪ್ತ ಸಮಾಲೋಚಕರು) ಪರಿಣಿತರಾಗಿರಬೇಕೆಂದು ಹಾಗೂ ಯುವಜನರು ಅದನ್ನು ಅನುಸರಿಸುವಂತೆ ಮಾಡುವ ಪರಿಣತಿ ಹೊಂದಿರಬೇಕೆಂದು ಅಪೇಕ್ಷಿಸಲಾಗುತ್ತದೆ" ಎಂದು ಅವರು ವಾದಿಸುತ್ತಾರೆ.

ಅವರು ಮುಂದುವರಿದು "ಯಾವಾಗ ವಿದ್ಯಾರ್ಥಿಗಳನ್ನು ಮಾರ್ಗದರ್ಶನಗಳಿಂದ ತುಂಬಿದ ಕೋಶಗಳಂತೆ ಇರಬೇಕು ಎಂದುಕೊಳ್ಳಲಾಗುತ್ತದೋ, ಆಗ ಎಲ್ಲರೂ ಆಪ್ತಸಮಾಲೋಚಕರ ಮೇಲೆ ಹೆಚ್ಚಿನ ಹೊರೆ ಹೊರಿಸುತ್ತಾರೆ. ಈ ವಿವೇಚನೆಯಿಲ್ಲದ ಮಾದರಿಯ ಪರಿಣಾಮವಾಗಿ ವಿದ್ಯಾರ್ಥಿಯಲ್ಲಿ ನಿಷ್ಕ್ರಿಯತೆ ಮತ್ತು ನಿರ್ಲಿಪ್ತತೆ ತಲೆದೋರಲು ಆರಂಭವಾಗುತ್ತದೆ" ಎನ್ನುತ್ತಾರೆ.

ಹಾಗಾಗಿ ಆಪ್ತಸಮಾಲೋಚಕರು ಈ ವಿವೇಚನೆಯಿಲ್ಲದ ಮಾದರಿಯಿಂದಾಗಿ, ಸಾಮಾಜಿಕ ಬದಲಾವಣೆಯ ಹರಿಕಾರರಾಗುವ ಬದಲು ಸಾಮಾಜಿಕ ನಿಯಂತ್ರಣದ ಸಾಧನಗಳಾಗಿಬಿಡುತ್ತಾರೆ. ವೈವಿಧ್ಯತೆಯನ್ನು ಪ್ರೋತ್ಸಾಹಿಸುವ ಬದಲು ರೂಢಿಗತ ಕ್ರಮಗಳನ್ನು ಅಥವಾ ಪ್ರಮಾಣಿತ ಸಂಗತಿಗಳನ್ನು ಜಾರಿಗೆ ತರುವ ಕೆಲಸ ಅವರದ್ದಾಗುತ್ತದೆ.

ಶಾಲಾ ಸಮುದಾಯಗಳಲ್ಲಿ ಇರುವ ಸಂಕಥನಗಳು ಶಾಲಾ ಸಮುದಾಯದ ಎಲ್ಲಾ ಸದಸ್ಯರ ಮೇಲೂ ಪರಿಣಾಮ ಬೀರುತ್ತವೆ. ಸಂಕಥನವೆಂದರೆ, "ಸಮಾನ ಮೌಲ್ಯಗಳನ್ನು ಹಂಚಿಕೊಳ್ಳುವ ಹೇಳಿಕೆಗಳ, ಆಚರಣೆಗಳ ಮತ್ತು ಸಾಂಸ್ಥಿಕ ರಚನೆಗಳ ವ್ಯವಸ್ಥೆ….. ನಿರ್ಬಂಧಿತ, ಅಭಿವ್ಯಕ್ತಿಶೀಲ ಸಂಕೇತಗಳು ಹಾಗೂ ಸಂಪ್ರದಾಯಗಳ ಗುಚ್ಛದ ಮೂಲಕ ಸಂಕಥನಗಳು ಒಂದು ನಿರ್ದಿಷ್ಟವಾದ ಸುಸ್ಥಿರ ಜಾಗತಿಕ ದೃಷ್ಟಿಕೋನವನ್ನು ಹೊಂದಿವೆ" ಎಂದು, ಡಿಸ್ಕೋರ್ಸಸ್ ಇನ್ ದಿ ಮಿರರ್ಡ್ ರೂಮ್: ಎ ಪೋಸ್ಟ್ ಮಾಡರ್ನ್ ಅನಾಲಿಸಿಸ್ ಆಫ್ ಥೆರಪಿ (Discourses in the mirrored room: a postmodern analysis of Therapy**)** ಎಂಬ ಲೇಖನದಲ್ಲಿ, ರಚೆಲ್ ಟಿ. ಹೇರ್-ಮಸ್ಟಿನ್ (Rachel T. Hare-Mustin) ಬರೆಯುತ್ತಾರೆ.

"ಅರ್ಥ ಗ್ರಹಿಕೆ ಮತ್ತು ಭಾಷೆಯ ಮೇಲಿನ ಹಿಡಿತವು, ಅಧಿಕಾರದಲ್ಲಿರುವವರು ಹೊಂದಿರುವ ಪ್ರಮುಖ ಸಂಪನ್ಮೂಲಗಳಾಗಿವೆ" ಎಂದು ಹೇರ್-ಮಸ್ಟಿನ್ ಬರೆಯುತ್ತಾರೆ. "ಶಾಲಾ ಸಮುದಾಯದ ವಿಭಿನ್ನ ಸದಸ್ಯರ ಬಗ್ಗೆ ಎಲ್ಲಾ ತರದ ಸಂಕಥನವಿರುತ್ತದೆ. ಒಬ್ಬ ಉತ್ತಮ ವಿದ್ಯಾರ್ಥಿ, ಒಬ್ಬ ಉತ್ತಮ ಶಿಕ್ಷಕ, ಒಬ್ಬ ಉತ್ತಮ ಪೋಷಕ ಅಥವಾ ಒಬ್ಬ ಉತ್ತಮ ಆಪ್ತಸಮಾಲೋಚಕ ಎಂಬುದನ್ನೆಲ್ಲ ನಿರ್ಧರಿಸುವ ಸಂಕಥನಗಳ ಬಗ್ಗೆ ಆಲೋಚಿಸುವುದನ್ನು ಪ್ರಾರಂಭಿಸುವುದು, ಶಾಲಾ ಪರಿಸರದಲ್ಲಿ ಅಧಿಪತ್ಯ ನಡೆಸುವವರು ಯಾರು ಎಂದು ಪ್ರತಿಫಲಿಸಿಕೊಳ್ಳಲು ಉತ್ತಮ ಸ್ಥಳವಾಗಿರುತ್ತದೆ. ಉತ್ತಮ ವಿದ್ಯಾರ್ಥಿ, ಉತ್ತಮ ಶಿಕ್ಷಕಿ, ಉತ್ತಮ ಪೋಷಕ ಅಥವಾ ಉತ್ತಮ ಆಪ್ತಸಮಾಲೋಚಕಿ/ಕ ಎಂದು ಯಾರು ನಿರ್ಧರಿಸುತ್ತಾರೆ ಎಂದು ಆಲೋಚಿಸುವುದು ಯಾರು ಅಧಿಕಾರ ಹೊಂದಿದ್ದಾರೆ ಎಂಬುದನ್ನು ತಿಳಿಯಲು ಉತ್ತಮ ಮಾರ್ಗವಾಗಿದೆ. ಶಾಲಾ ಸಮುದಾಯದ ಎಲ್ಲರ ಬದುಕೂ, ಅಲ್ಲಿರುವ ಈ ರೀತಿಯ ಎಲ್ಲಾ ಸಂಕಥನಗಳಿಂದ ಪ್ರಭಾವಿತವಾಗಿರುತ್ತದೆ.

*ಇಂತಹ ಹೇಳಿಕೆಗಳು ವಯಸ್ಕರ ಕಥನಗಳ ಪ್ರಾಬಲ್ಯವನ್ನು ಸ್ಥಾಪಿಸುತ್ತವೆ ಮತ್ತು ಯುವಜನರ ಅನುಭವಗಳು ಅವರಿಂದಲೇ ವ್ಯಕ್ತವಾದಾಗಲೂ ಅವುಗಳನ್ನು ಹತ್ತಿಕ್ಕುತ್ತವೆ. ಈ ಸಂಕಥನಗಳನ್ನು ಯುವಜನರು ಮತ್ತು ವಯಸ್ಕರು ಆಂತರ್ಗತಗೊಳಿಸಿಕೊಂಡಿರುತ್ತಾರೆ. ಹೀಗಾಗಿ ಅವುಗಳನ್ನು ಕ್ಷುಲ್ಲಕಗೊಳಿಸುವುದು ಇನ್ನೂ ಹೆಚ್ಚೆಂದರೆ, ಸಮಸ್ಯಾತ್ಮಕವೆಂದು ಯುವಜನರ ಅನುಭವಗಳನ್ನು ನಿಷ್ಪ್ರಯೋಜಕಗೊಳಿಸಲಾಗುತ್ತದೆ.*

**ಅಧಿಕಾರವು ಅದನ್ನು ಅನುಭವಿಸುವವರಿಗೆ ಅಗೋಚರವಾಗಿರುತ್ತದೆ**

ಯುವಜನರು ಮತ್ತು ವಯಸ್ಕರ ನಡುವೆ ಅಂತರ್ಗತವಾಗಿರುವ ಅಧಿಕಾರದ ನಂಟು ಎಷ್ಟು ಪ್ರಬಲವಾದುದು ಎಂದರೆ, ಯುವಜನರು ಒಂದು ನಿರ್ದಿಷ್ಟವಾದ ಅನುಭವದ ಬಗ್ಗೆ ಒಂದು ನಿರ್ದಿಷ್ಟ ಸಮಯದಲ್ಲಿ ನಮಗೆ ತಿಳಿಯದೇ ಇರುವಂತಹ ಸಂಗತಿಯನ್ನು ತಿಳಿದಿರಬಹುದು ಎನ್ನುವುದು ಮತ್ತು ಈ ಪ್ರಪಂಚವನ್ನು ಕುರಿತ ಕೊನೆಯಿಲ್ಲದ ಸಾಧ್ಯತೆಗಳನ್ನು ಅವರು ಹುದುಗಿಸಿಕೊಂಡಿರಬಹುದು ಎಂಬುದು ನಮಗೆ ಗೊತ್ತಾಗದೇ ಹೋಗಬಹುದು.

ಆರ್ಯನ್ ಎಂಬ ಯುವಕನೊಡನೆ ನಾನು ಮಾತನಾಡುವಾಗ ಅವನು ಹೀಗೆ ಹೇಳಿದ: "ನೀವು ಅನುಭವಿಸುವ ನೋವಿನ ಪ್ರಮಾಣವನ್ನು ಅಳೆಯಲು ಅಥವಾ ಅದಕ್ಕೊಂದು ಪ್ರಮಾಣ ನೀಡಲು ನಿಮ್ಮ ವಯಸ್ಸನ್ನು ಆಧಾರವಾಗಿಟ್ಟುಕೊಳ್ಳಲು ಸಾಧ್ಯವಿಲ್ಲ" ಎಂದು.

ಆತ ವಯಸ್ಸನ್ನು ಯಾಕೆ ಪ್ರಸ್ತಾಪಿಸಿದ? ನಾವು ಅನುಭವಿಸುವ ನೋವನ್ನು ವಯಸ್ಸು ತೀರ್ಮಾನಿಸಬಹುದು ಎಂಬುದನ್ನು ಆತ ಎಲ್ಲಿ ಕೇಳಿರಬಹುದು? ನಾನು ಇದನ್ನೇ ಆತನಿಗೆ ಕೇಳಿದಾಗ, "ಅಯ್ಯೋ ನಿನಗೆ ಇನ್ನೂ ಹದಿನಾರೋ, ಹದಿನೇಳೋ, ಹದಿನೆಂಟೋ ವಯಸ್ಸು. ನೀನಿನ್ನೂ ಸಣ್ಣವನು. ನೀನು ನೋಡೋದು ಇನ್ನೂ ಸಾಕಷ್ಟಿದೆ (ನೀನು ದೊಡ್ಡವನಾದಾಗ) ಎಂದು ಎಷ್ಟೋ ಜನ ನನಗೆ ಹೇಳುತ್ತಾರೆ" ಎಂದು ಉತ್ತರಿಸಿದ.

ಅಂದರೆ, ಇಂತಹ ಹೇಳಿಕೆಗಳು ವಯಸ್ಕರ ಕಥನಗಳ ಪ್ರಾಬಲ್ಯವನ್ನು ಸ್ಥಾಪಿಸುತ್ತವೆ ಮತ್ತು ಯುವಜನರ ಅನುಭವಗಳು ಅವರಿಂದಲೇ ವ್ಯಕ್ತವಾದಾಗಲೂ ಅವುಗಳನ್ನು ಹತ್ತಿಕ್ಕುತ್ತವೆ. ಈ ಸಂಕಥನಗಳನ್ನು ಯುವಜನರು ಮತ್ತು ವಯಸ್ಕರು ಆಂತರ್ಗತಗೊಳಿಸಿಕೊಂಡಿರುತ್ತಾರೆ. ಹೀಗಾಗಿ ಅವುಗಳನ್ನು ಕ್ಷುಲ್ಲಕಗೊಳಿಸುವುದು ಇನ್ನೂ ಹೆಚ್ಚೆಂದರೆ, ಸಮಸ್ಯಾತ್ಮಕವೆಂದು ಯುವಜನರ ಅನುಭವಗಳನ್ನು ನಿಷ್ಪ್ರಯೋಜಕಗೊಳಿಸಲಾಗುತ್ತದೆ.

ಇದನ್ನೇ ಸ್ವಲ್ಪ ವಿಸ್ತರಿಸುವುದಾದರೆ, ವಯಸ್ಕರು ಮತ್ತು ಯುವಜನರ ನಡುವಿನ ಅಧಿಕಾರದ ಸಂಬಂಧ ನಿರ್ಬಂಧ ಮತ್ತು ನಿರಾಕರಣೆಯಂತಹ ತೀವ್ರ ನಡೆಗೆ ಕಾರಣವಾಗುತ್ತದೆ. ಆ ಮೂಲಕ ನಮ್ಮ ಸಮಾಜದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಶ್ರೇಣೀಕರಣ, ಸ್ಪರ್ಧಾತ್ಮಕತೆ ಮತ್ತು ವಿಷಕಾರಿಯಾದ ಪುರುಷತ್ವಗಳನ್ನು ಶಾಶ್ವತಗೊಳಿಸುವ ವ್ಯವಸ್ಥೆಯನ್ನು ಹೊಣೆ ಮಾಡುವ ಬದಲಿಗೆ ಅದು ಆ ವಿದ್ಯಾರ್ಥಿಯ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತದೆ.

**ಮಕ್ಕಳು ಮತ್ತು ಯುವಜನ ಪರಿಣತಿಯನ್ನು ಹೊಂದಿರುತ್ತಾರೆ**

ಎಳೆಯರೂ ಸೇರಿದಂತೆ ಎಲ್ಲಾ ಜನರೂ ತಮ್ಮ ಜೀವನದ ಬಗ್ಗೆ ಪರಿಣತಿ ಹೊಂದಿರುತ್ತಾರೆ ಎಂಬ ಅಂಶವನ್ನು ಅರ್ಥ ಮಾಡಿಕೊಳ್ಳಲು ಆಪ್ತಸಮಾಲೋಚಕಿಯಾಗಿ ನನ್ನ ಕೆಲಸದ ಮೇಲೆ ಪ್ರಭಾವ ಬೀರುವಂತಹ ಆಚರಣೆಗಳು, ಅಂದರೆ ಕಥನ ವಿಧಾನಗಳು ನನ್ನ ಕೆಲಸಕ್ಕೆ ನೆರವಾಗಿವೆ. ಆಟಿಸಂ ಮಕ್ಕಳು ಮತ್ತು ಇತರ ನರಗಳ ಬೆಳವಣಿಗೆ ಸಂಬಂಧಿ ಸಮಸ್ಯೆ ಇರುವ, ಕಲಿಕಾತ್ಮಕ ಅಥವಾ ಸಮಾಜೋ-ಭಾವನಾತ್ಮಕ ವ್ಯತ್ಯಾಸಗಳನ್ನು ಹೊಂದಿರುವ ಎಳೆಯರೊಂದಿಗೆ ಕೆಲಸ ಮಾಡುವಾಗಿನ ನನ್ನ ಅನುಭವವನ್ನು ಇದು ಬಲಪಡಿಸಿದೆ. ಸಮಾಲೋಚಕಿಯಾಗಿ ಮತ್ತು ಚಿಕಿತ್ಸಕಿಯಾಗಿ, ಮಕ್ಕಳು ಮತ್ತು ಯುವಕರಲ್ಲಿರುವ ಈ ಪರಿಣತಿಯನ್ನು ಹೊರಹಾಕಲು ಬೇಕಾದ ಸಾಧನ ಮತ್ತು ತಂತ್ರಗಳನ್ನು ಕಲಿಯುಯಲೂ ಈ ವಿಧಾನದಿಂದ ನನಗೆ ಸಾಧ್ಯವಾಯಿತು. ಅವರಲ್ಲಿನ ಈ ಪರಿಣತಿಯನ್ನು

ಗೋಚರಿಸುವಂತೆ ಮಾಡಬೇಕಾದರೆ ನಾವು, ಅವರ ಸ್ವಂತ ಬುದ್ಧಿಶಕ್ತಿ ಮತ್ತು ಜ್ಞಾನವನ್ನು ಒರೆಗೆ ಹಚ್ಚಬಲ್ಲ ಅವಕಾಶವನ್ನು ಸೃಷ್ಟಿಸಿಕೊಡಬೇಕು. ಮುಖ್ಯವಾಗಿ ಅಲ್ಲಿ ನಾವು ಪರಿಣತರಾಗಿ ಕಾಣಿಸಿಕೊಳ್ಳದೆ, ಚಿಕಿತ್ಸೆ ಹಾಗೂ ಸಮುದಾಯ ಕಾರ್ಯದಲ್ಲಿನ ಕಥನ ವಿಧಾನದ ಭಾಷೆಯನ್ನು ಅನುಸರಿಸಬೇಕು. ಸಹ ಸಂಶೋಧಕರಾಗಿ ನಾವು ಕುತೂಹಲಪೂರ್ವಕವಾಗಿ ಜ್ಞಾನವನ್ನು ಮತ್ತು ಎಳೆಯರಿಂದ ಎದುರಾಗಬಹುದಾದ ಸಮಸ್ಯೆಗಳನ್ನು ಹತ್ತಿಕ್ಕುವ ಸಾಧ್ಯತೆಗಳನ್ನು ಅನ್ವೇಷಿಸುತ್ತೇವೆ.

**ಹಾಗಿದ್ದರೆ, ಶಾಲೆಯ ಆಪ್ತಸಮಾಲೋಚಕರಾಗಿ ನಮ್ಮ ಕೆಲಸವೇನು?**

ಸಮಸ್ಯೆಯನ್ನು ಎದುರಿಸುತ್ತಿರುವ ವ್ಯಕ್ತಿಯು (ಅವರು ಮಕ್ಕಳಾಗಿರಲಿ ಅಥವಾ ಯುವಕರಾಗಿರಲಿ) ಅದರ ಖುದ್ದು ಅನುಭವವನ್ನೂ, ಸಮಸ್ಯೆಯನ್ನು ಕುರಿತಾದ ಆಳವಾದ ತಿಳಿವಳಿಕೆಯನ್ನೂ ಹೊಂದಿರುತ್ತಾರೆ ಎಂಬ ನಂಬಿಕೆಗೆ ನಾವು ಅಂಟಿಕೊಂಡು ಬಿಡುತ್ತೇವೆ ಮತ್ತು ಅವರು ಯಾವಾಗಲೂ ಸಮಸ್ಯೆಗೆ ಪ್ರತಿರೋಧವನ್ನು ಒಡ್ಡಬಲ್ಲರು ಮತ್ತು ಒಡ್ಡುತ್ತಿರುತ್ತಾರೆ ಎಂದೇ ನಂಬಿಬಿಡುತ್ತೇವೆ. ಈ ದೃಷ್ಟಿಕೋನದಿಂದ ಕೆಲಸ ಮಾಡುವುದೆಂದರೆ, ಸಮಸ್ಯೆಗೆ ಪ್ರತಿಕ್ರಿಯಿಸುವ ಮಾರ್ಗವನ್ನು ಹೇಳಿಕೊಡುವ ಬದಲು ನಾವು ಅವರ ಜೀವನದ ಸಮಸ್ಯೆಗಳಿಗೆ ಅವರು ಹೇಗೆ ಸ್ಪಂದಿಸುತ್ತಾರೆ ಎಂಬುದನ್ನು ನೋಡುತ್ತಿರುತ್ತೇವೆ. ಅವರು ಎದುರಿಸುತ್ತಿರುವ ಸಮಸ್ಯೆಯ ಬಗ್ಗೆ ಅವರಿಗೆಷ್ಟು ತಿಳಿದಿದೆ ಎಂದು ಕೇಳಿ ತಿಳಿದುಕೊಳ್ಳಲು, ಅವರ ಬದುಕಿನ ಮೇಲೆ ಅದು ಎಷ್ಟು ಪ್ರಭಾವ ಬೀರಿದೆ ಮತ್ತು ಅದನ್ನು ನಿಜಜೀವನದಲ್ಲಿ ಅವರು ಹೇಗೆ ಎದುರಿಸುತ್ತಾರೆ ಹಾಗೂ ಅವರಿಗೆ ಮುಂದಿನ ದಿನಗಳಲ್ಲಿ ಎದುರಾಗುವ ಸಮಸ್ಯೆ ಎದುರಿಸಲು ಅವರು ಎಷ್ಟು ತಯಾರಾಗಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಉದ್ದೇಶದಿಂದ ನಾವು ಅವರನ್ನು ಭೇಟಿಯಾಗುತ್ತೇವೆ.

*"ನೀವು ಅವರಿಗೆ ಪ್ರೀತಿ ಕೊಡಬಹುದು, ನಿಮ್ಮ ಆಲೋಚನೆಗಳನ್ನಲ್ಲ*
*ಅವರಿಗೆ ಅವರದೇ ಆದ ಆಲೋಚನೆಗಳಿವೆ.*
*ಅವರ ಶರೀರಕ್ಕೆ ಮನೆ ಕೊಡಬಹುದು, ಅವರ ಆತ್ಮಗಳಿಗಲ್ಲ,*
*ಅವರ ಆತ್ಮಗಳು ನಾಳೆ ಎಂಬ ಮನೆಗಳಲ್ಲಿ ನೆಲೆಸಿವೆ.*
*ಅವುಗಳನ್ನೆಂದೂ ನೀವು ಭೇಟಿಯಾಗಲಾರಿರಿ, ನಿಮ್ಮ ಕನಸುಗಳಲ್ಲೂ.*
*ಅವರಂತಾಗಲು ನೀವು ಯತ್ನಿಸಬಹುದು,*
*ಆದರೆ ನಿಮ್ಮಂತಾಗಲಿ ಅವರು ಎಂದು ಆಶಿಸಬೇಡಿ.*
*ಬದುಕು ಹಿಮ್ಮುಖವಾಗಿಯೋ, ನೆನ್ನೆಗಳಿಂದಲೋ ಚಲಿಸುವುದಿಲ್ಲ".*
-ಮಕ್ಕಳ ಬಗ್ಗೆ ಖಲೀಲ್ ಗಿಬ್ರಾನ್

"ನಮ್ಮ ಬದುಕು ಬಹುಮಹಡಿಯದ್ದು!"- ಕಥನ ವಿಧಾನಗಳ ಮೂಲಕ ನನ್ನಲ್ಲಿ ಈ ನಂಬಿಕೆ ಪುನರ್ಬಲಗೊಂಡಿದೆ. ನಮ್ಮ ಕೆಲಸವೇನೆಂದರೆ, ಪರ್ಯಾಯ ಕತೆಗಳನ್ನು- ಅನೇಕ ಕಥೆಗಳನ್ನು- ಈ ಹಿಂದೆ ನಮಗೆ ಗೊತ್ತಿರದ ಅನೇಕ ಕತೆಗಳನ್ನು ಉತ್ಪನನ ಮಾಡುವುದು ಮತ್ತು ಸಂರಕ್ಷಿಸುವುದು. ಯಜಮಾನ್ಯ ಸಂಕಥನಗಳಿಗೆ ಪ್ರತಿರೋಧವನ್ನೊಡ್ಡುವುದು ಮತ್ತು ಕತೆ ಹೇಳಲು ಕೋರುವುದು. ನೈಜ ಕುತೂಹಲದಿಂದ ಕತೆಗಳನ್ನು ಹೇಳಲು ಕೋರಿದರೆ ಅಥವಾ ಆ ಕತೆಗಳನ್ನು ನೈಜ ಕುತೂಹಲದಿಂದ ಆಲಿಸಿದರೆ ನಮ್ಮ ಅರಿವಿಗೆ ಬಾರದ ಇನ್ನೂ ಎಷ್ಟೋ ಸಾಧ್ಯತೆಗಳ ಸಲುವಾಗಿನ ಕುತೂಹಲ ಮತ್ತು ವಿಶ್ವಾಸ ಅಲ್ಲಿ ಹೊರಹೊಮ್ಮಬಹುದು.

***

**ಪ್ರಥಮಾ ರಾಘವನ್**: ಇವರು ಡೆವಲಪ್‌ಮೆಂಟಲ್ ಸೈಕಾಲಜಿಸ್ಟ್ ಆಗಿದ್ದು, ಫ್ರಾನ್ಸ್‌ನ ಮಾಂಟ್‌ಪೆಲ್ಲಿಯರ್ ಪೌಲ್ ವಲೇರಿ ಯುನಿವರ್ಸಿಟಿಯಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಪ್ರಸ್ತುತ ಅವರು, ನೇಪಾಳದ ಕಠ್ಮಂಡುವಿನಲ್ಲಿ ಮಾನಸಿಕ ಆರೋಗ್ಯ ಮತ್ತು ದೌರ್ಬಲ್ಯ ನೆರವು ಕ್ಷೇತ್ರದಲ್ಲಿ ಶಾಲಾ ಆಪ್ತಸಮಾಲೋಚಕರಾಗಿ ಕೆಲಸ ಮಾಡುತ್ತಿದ್ದಾರೆ. ಸ್ತ್ರೀವಾದಿ, ಅಂಗವೈಕಲ್ಯ ನ್ಯಾಯ (disability justice), ನರ ವೈವಿಧ್ಯತೆ (neurodiversity), ಕಥನ ಮಾರ್ಗಗಳು ಮತ್ತು ಕಾವ್ಯ ಕ್ಷೇತ್ರದಲ್ಲಿ ಅವರು ಹೆಸರು ಮಾಡಿದ್ದಾರೆ. ಅವರು ಇತ್ತೀಚೆಗೆ ಗುಂಪು ಸಂಭಾಷಣೆಗಳ ಮೂಲಕ  ಪರಿಪೂರ್ಣ ಜಗತ್ತಿಗೆ ದೂರದಲ್ಲಿರುವ 'ಅಪರಿಪೂರ್ಣ ಒಗ್ಗಟ್ಟು' ನಿರ್ಮಿಸಿ ಕೆಲಸ ಮಾಡಲು ಆಸಕ್ತರಾಗಿದ್ದಾರೆ.

https://madinasia.org/2020/04/children-possess-expertise-about-their-own-lives-and-its-time-we-listen/